ಕರ್ನಾಟಕ ಸರ್ಕಾರ (ಸಿ.ಆರ್.ಪಿ.೬೭)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4
(ಸಿವಿಲ್)

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**
**ಇವರ ನ್ಯಾಯಾಲಯದಲ್ಲಿ.**
**ಸಿ.ಸಿ. ನಂಬರ್.1128–2014**

.ವಿರುದ್ದ

ಪಿ.ಡಬ್ಲೂ:೪
ಸಿ.ಡಬ್ಲೂ:೩

ಹೆಸರು : ಮಧುಸುದನ್
ತಂದೆ ಹೆಸರು : ಲೋಕೇಶ್ವರಪ್ಪ
ವಯಸ್ಸು : ೫೦ ವರ್ಷ
ಉದ್ಯೋಗ : ಜೋತಿಷ್ಯ
ವಾಸಸ್ಥಳ : ಹೊಸಕೋಟೆ
ದಿ: ೧೩.೦೭.೨೦೨೨ ರಂದು ಸತ್ಯ ಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಈಗ ನನಗೆ ತೋರಿಸುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದ್ದು, ಸದರಿ ದಾಖಲೆ ಸ್ಥಳ ಪಂಚನಾಮೆ ಇದ್ದು, ಅದನ್ನು ಈಗಾಗಲೇ ನಿಪಿ.೨ ಎಂದು, ಸಾಕ್ಷಿಯ ಸಹಿಯನ್ನು ನಿಪಿ.೨(ಸಿ) ಎಂದು ಗುರುತಿಸಲಾಯಿತು. ೨೦೧೪ ರಲ್ಲಿ ಪೊಲೀಸರು ಸ್ಥಳಕ್ಕೆ ಬಂದು, ಕಳ್ಳತನ ಆಗಿರುವ ಕುರಿತು ಪಂಚನಾಮೆ ಮಾಡಿದರು.

( ಈ ಹಂತದಲ್ಲಿ ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಆರೋಪಿ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ, ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**

ಕರ್ನಾಟಕ ಸರ್ಕಾರ (ಸಿ.ಆರ್.ಪಿ.೬೭)

| |
|---|
| **ಹೇಳಿಕೆ ಹಾಳೆ** |
| **(ಆರ್.ಪಿ.ಸಂಖ್ಯೆ 57)** |
| **ನಮೂನೆ ಸಂಖ್ಯೆ 4** |
| **(ಸಿವಿಲ್)** |

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**
**ಇವರ ನ್ಯಾಯಾಲಯದಲ್ಲಿ.**
**ಸಿ.ಸಿ. ನಂಬರ್.1128–2014**

.ವಿರುದ್ಧ

ಪಿ.ಡಬ್ಲ್ಯೂ:೫
ಸಿ.ಡಬ್ಲ್ಯೂ:೬

ಹೆಸರು : ಶ್ರೀನಿವಾಸ
ತಂದೆ ಹೆಸರು : ಅಕ್ಕಲಪ್ಪ
ವಯಸ್ಸು : ೫೨ವರ್ಷ
ಉದ್ಯೋಗ : ಕೂಲಿ
ವಾಸಸ್ಥಳ : ದೊಡ್ಡಬಳ್ಳಾಪುರ
ದಿ: ೧೩.೦೭.೨೦೨೨ ರಂದು ಸತ್ಯ ಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಈಗ ನನಗೆ ತೋರಿಸುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದ್ದು, ಸದರಿ ದಾಖಲೆ ಪಂಚನಾಮೆಯ ಕಾರ್ಬನ್ ಕಾಪಿ ಇದ್ದು, ಅದನ್ನು ನಿಪಿ.೫ ಎಂದು, ಸಾಕ್ಷಿಯ ಸಹಿಯನ್ನು ನಿಪಿ.೫(ಎ) ಎಂದು ಗುರುತಿಸಲಾಯಿತು. ನಿಪಿ.೫ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ೨೦೧೪ರಲ್ಲಿ ಪೊಲೀಸರು ಸದರಿ ದಾಖಲೆಗೆ ಮಾಲೂರು ಮುತ್ತುಟ್ ಫೈನಾನ್ಸ್‌ನಲ್ಲಿ ಸಹಿ ಪಡೆದುಕೊಂಡರು. ನನ್ನ ಸಮಕ್ಷಮ ಪೊಲೀಸರು ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಜಪ್ತ ಪಡಿಸಿಕೊಂಡಿಲ್ಲ.

( ಈ ಹಂತದಲ್ಲಿ ಸಸಅ ರವರ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರೆ ಅಂಶಗಳನ್ನು ಗಮನಿಸಿ ಪಾಟೀ ಸವಾಲು ಅನುಮತಿ ನೀಡಲಾಯಿತು)

ಪಾಟೀ ಸವಾಲು: ಸಸಅ ರವರಿಂದ.

ದಿ: ೯.೦೮.೨೦೧೪ ರಂದು ಈಗ ಓದಿ ಹೇಳಿದಂತೆ ಪೊಲೀಸರು ನನ್ನ ಸಮಕ್ಷಮ ನಿಪಿ.೫ ರಂತೆ ಪಂಚನಾಮೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಒಂದು ಚೈನ್ ಮತ್ತು ತಾಳಿ ಜಪ್ತ ಪಡಿಸಿಕೊಂಡರು ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ನಿಪಿ.೫ ರಂತೆ ಪಂಚನಾಮೆ ಜರುಗಿಸಿದ್ದರು ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಆರೋಪಿ ಪರವಾಗಿ ಶ್ರೀ ಎಸ್.ಎಸ್.ಜಿ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ)

**ಮರುವಿಚಾರಣೆ**: –ಇಲ್ಲ–

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**